ಶ್ರೀ ಉಮೇಶ್ ವಿ. ಕತ್ತಿ. : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಹೇಳಿದಂತೆ, 6 ಸಕ್ಕರೆ ಕಾರ್ಖಾನೆಗಳು ಸೊಸೈಟಿ ರಿಜಿಸ್ಟ್ರೇಷನ್ ಮಾಡಿ ಪರವಾನಿಗೆಯನ್ನು ಪಡೆದು ಇಲ್ಲಿಯವರೆಗೆ ಷೇರ್ ಸಂಗ್ರಹಣೆ ಮಾಡದೆ 1986 ರಲ್ಲಿ ರಿಜಿಸ್ಟ್ರೇಷನ್ ಆಗಿ ಅಕ್ವಿಡೇಷನ್ ಆಗಿ ಕ್ಲೋಸ್ ಆಗಿವೆ. ಎರಡನೆಯದಾಗಿ ಮೂರು ಸಕ್ಕರೆ ಕಾರ್ಖಾನೆಗಳ ಸೊಸೈಟಿ ರಿಜಿಸ್ಟ್ರೇಷನ್ ಆಯಿತು, ಆದರೆ ಪರವಾನಿಗೆ ಪಡೆಯಲಿಲ್ಲ. ಹಾಗಾಗಿ 1986 ರಲ್ಲಿದ್ದಂಥ ಸಕ್ಕರೆ ಕಾರ್ಖಾನೆಗಳು ಅವೂ ಕೂಡ ಲಿಕ್ವಿಡೇಷನ್ ಆದವು. ಈ ರೀತಿ ಒಂಬತ್ತು ಸಕ್ಕರೆ ಕಾರ್ಖಾನೆಗಳು ಪರವಾನಿಗೆಯನ್ನು ಪಡೆಯದೆ ಇದ್ದ ಕಾರಣ, ಷೇರು ಸಂಗ್ರಹಣೆ ಮಾಡದಿದ್ದ ಕಾರಣ ಲಿಕ್ವಿಡೇಷನ್ ಮುಖಾಂತರ ಸಮಾಪನ ಮಾಡಲಾಗಿದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲು ಇಚ್ಛಿಪಡುತ್ತೇನೆ.

ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಮನೆಗಳನ್ನು ಸಕ್ರಮಗೊಳಿಸುವುದು

168 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನರಸಿಂಹರಾಜ ಕ್ಷೇತ್ರದ ರಾಘವೇಂದ್ರ ಬಡಾವಣೆಯ ನಾಲ್ಕು ಕ್ರಾಸ್‌ಗಳಲ್ಲಿ ಸುಮಾರು 90 ಮನೆಗಳನ್ನು ಸಕ್ರಮ ಕಾರ್ಯ ಮಾಡದೆ ಎಲ್ಲಾ ಬಡಾವಣೆಗಳಲ್ಲಿ ಸಕ್ರಮಕಾರ್ಯ ನಡೆಯುತ್ತಿದ್ದರೂ ಯಾವುದೋ ರಾಜಕಾರಣಿಯ ಪ್ರಭಾವದಿಂದ ಈ ತೊಂಭತ್ತು ಮನೆಯವರಿಗೆ ಮಾತ್ರ ಸಕ್ರಮದ ಅರ್ಜಿಗಳನ್ನು ನೀಡದೆ ಸಕ್ರಮಗೊಳಿಸದಿರಲು ಕಾರಣವೇನು?*

ಆ) *ಈ ಮನೆಗಳನ್ನು ಸಕ್ರಮಗೊಳಿಸುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?*

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ನ್ಯಾಯಾಲಯ ದಿನಾಂಕ 28-8-96ರಂದು ಯಥಾಸ್ಥಿತಿ ಕಾಪಾಡಿಕೊಂಡು ಬರಲು ಆದೇಶಿಸಿದ್ದರಿಂದ ಸದರಿ ಬಡಾವಣೆಗಳ ನಿವೇಶನಗಳನ್ನು ಸಕ್ರಮಗೊಳಿಸಲಾಗಿಲ್ಲ.

ಆ) ದಿನಾಂಕ 3-12-97 ರಂದು ನ್ಯಾಯಾಲಯ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿರು -ವುದರಿಂದ ಈಗ ಸಕ್ರಮಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಇ. ಮಾರುತಿರಾವ್ ಪವಾರ್ : ಸನ್ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ದಿನಾಂಕ 28-8-95 ರಂದು ಯಥಾಸ್ಥಿತಿ ಕಾಪಾಡಿಕೊಂಡು ಹೋಗಬೇಕೆಂದು ಕೋರ್ಟ್ ಆದೇಶ ಬಂದಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಅದರ ಕೆಳಗಡೆ ದಿನಾಂಕ 3-12-97 ರಂದು ನ್ಯಾಯಾಲಯ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿದ್ದು ಈಗ ಸಕ್ರಮಗೊಳಿಸುತ್ತೇವೆನ್ನುವ ಉತ್ತರವನ್ನು ಕೊಟ್ಟಿದ್ದಾರೆ. ನನಗಾದರೂ ಅನ್ನಿಸುವುದೇನೆಂದರೆ, ಈಗ ನಗರ ಪಾಲಿಕೆ ಏನಿದೆ, ದಿನಾಂಕ: 3-12-97 ರಂದು ಏನು ಅರ್ಜಿಯನ್ನು ವಜಾ ಮಾಡಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ ಆ ಅರ್ಜಿಯನ್ನು ನಗರಪಾಲಿಕೆಗೆ ತಲುಪಿಸಿರಲಿಲ್ಲ.

ನಾನು ಹತ್ತು ದಿವಸಗಳ ಹಿಂದೆ ಅಲ್ಲಿ ರಾಜೇಂದ್ರ ಬಡಾವಣೆಯಲ್ಲಿ ವಾಸ ಮಾಡುವ ನಾಗರಿಕರು ಯಾರಿದ್ದಾರೆ ಅವರನ್ನು ಕೋರ್ಟ್‌ಗೆ ಕರೆದುಕೊಂಡು ಹೋಗಿ ಕೋರ್ಟ್ ಏನು ತಿರಸ್ಕಾರ ಮಾಡಿದೆ ಆ ಪ್ರತಿಯನ್ನು ತೆಗೆದುಕೊಂಡು ಹೋಗಿ ನಗರಪಾಲಿಕೆಗೆ ಕೊಟ್ಟೆ. ಅದಾದ ಮೇಲೆ ಇದು ವಜಾ ಆಗಿದೆ ಎನ್ನುವ ಮಾತನ್ನು ಹೇಳಿದರು. ಅಲ್ಲಿ ಬಡಾವಣೆಯಲ್ಲಿ ವಾಸ ಮಾಡುವ ಜನರು ಯಾರಿದ್ದಾರೆ ಅವರಿಗೆ, ಅಲ್ಲಿರುವ ಎಕ್ಸ್ಸ್ ಕಾರ್ಪೊರೇಟರ್ ಆಗಿರುವ ಒಬ್ಬ ರಾಜಕಾರಣಿ ಎಷ್ಟು ದಬ್ಬಾಳಿಕೆ ಮಾಡುತ್ತಾನೆ ಎಂದರೆ ಅವರು ಒಂದು ಟಾಯ್‌ಲೆಟ್ ಕಟ್ಟಿಕೊಳ್ಳುವುದಕ್ಕೆ ಬಿಡುವುದಿಲ್ಲ, ಒಂದು ನಲ್ಲಿ ಹಾಕಿಕೊಳ್ಳುವುದಕ್ಕೆ ಬಿಡುವುದಿಲ್ಲ, ಒಂದು ಕಾಪೌಂಡ್ ಹಾಕಿಕೊಳ್ಳುವುದಕ್ಕೆ ಬಿಡುವುದಿಲ್ಲ, ಒಂದು ಕಿಟಿಕಿ ಹಾಕಿಕೊಳ್ಳುವುದಕ್ಕೆ ಬಿಡುವುದಿಲ್ಲ, ಒಂದು ಗೇಟ್ ಹಾಕಿಕೊಳ್ಳುವುದಕ್ಕೆ ಬಿಡುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅವರಿಗೆ ರಕ್ಷಣೆಯೂ ಇಲ್ಲ, ಸಕ್ರಮಗೊಳಿಸದೆ ಅವರಿಗೆ ಸರಿಯಾದ ನಾಗರಿಕ ಸೌಲಭ್ಯಗಳು ದೊರೆಯುವುದಕ್ಕೂ ಅವಕಾಶವಿಲ್ಲ. 1997ರ ಡಿಸೆಂಬರ್‌ನಲ್ಲಿ ಬಂದಿರುವ ಅರ್ಜಿಯನ್ನು ಇಟ್ಟುಕೊಂಡು ನಾಲ್ಕು ತಿಂಗಳಾದರೂ ಅವರು ಸಕ್ರಮಗೊಳಿಸಲಿಲ್ಲವೆಂದರೆ ಹೇಗೆ ನಗರಪಾಲಿಕೆ ಇಲ್ಲಿ ಇದೆಯಾ? ಅಲ್ಲಿಯ ಜನರಿಗೆ ಹೇಗೆ ರಕ್ಷಣೆ ಕೊಡುವುದು, ಅವರು ಜನರಿಗೆ ಹೇಗೆ ನಾಗರಿಕ ಸೌಲಭ್ಯಗಳನ್ನು ಒದಗಿಸಿಕೊಡುತ್ತಾರೆನ್ನುವ ಉತ್ತರವನ್ನು ದಯಮಾಡಿ ಅವರಿಗೆ ರಕ್ಷಣೆಕೊಡುವುದರ ಮೂಲಕ ಸಚಿವರು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯದಲ್ಲಿ ಏನಾಗಿತ್ತೆಂದರೆ, ಆ ಮಹಿಳೆ ಸರ್ವೆ ನಂ. ಸುಮಾರು 177ರಲ್ಲಿ ಬಹಳ ವರ್ಷಗಳ ಹಿಂದೆಯೇ 90 ಮನೆಗಳನ್ನು ಕಟ್ಟುವುದಕ್ಕೆ ಈ ನಿವೇಶನ ರಹಿತರಿಗೆ ಮಾರಾಟ ಮಾಡಿದ್ದರು. ಅವರು ಅಲ್ಲಿ ಮನೆಗಳನ್ನು ಕಟ್ಟಿಸಿಕೊಂಡಿದ್ದರು, ನಗರಪಾಲಿಕೆಯ ವತಿಯಿಂದ ಸೌಲಭ್ಯಗಳಾದ ನೀರು, ವಿದ್ಯುತ್, ರಸ್ತೆ ಮುಂತಾದವುಗಳನ್ನು ಅವರಿಗೆ ಕೊಡಲಾಗಿದೆ. ಆದರೆ ನಂತರ ಆ ಮಹಿಳೆಯರ ಮುಕ್ಕಳೇ ಕೋರ್ಟಿನಲ್ಲಿ ದಾವೆ ಹೂಡಿ, ನಾವುಗಳು ಅಪ್ರಾಪ್ತ ವಯಸ್ಕರಾಗಿದ್ದಾಗ ಇದನ್ನು ಮಾಡಲಾಗಿತ್ತು, ಇದನ್ನು ರದ್ದುಗೊಳಿಸಬೇಕೆಂದು ನ್ಯಾಯಾಲಯಕ್ಕೆ ಹೋಗಿದ್ದು, ಆಗಸ್ಟ್ 1996 ರಂದು ನ್ಯಾಯಾಲಯ ತಡೆಯಾಜ್ಞೆಯನ್ನು ಕೊಟ್ಟಿತು. ಈಗ ದಿನಾಂಕ 3-12-1997ರಂದು ಆ ಅರ್ಜಿಯನ್ನು ತಿರಸ್ಕರಿಸಿದ್ದರಿಂದ ಈಗ ಈ ಸಕ್ರಮ ಕಾರ್ಯವನ್ನು ಮಾಡುತ್ತೇವೆಂದು ನಮಗೆ ಅವರು ಅಲ್ಲಿಂದ ತಿಳಿಸಿದ್ದಾರೆ. ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ರಾಜಕೀಯ ಏನಿದ್ದರೂ ಕೂಡ ಆದಷ್ಟು ಶೀಘ್ರದಲ್ಲಿ ಈ 90 ನಿವೇಶನಗಳನ್ನು ಸಕ್ರಮ ಮಾಡುವ ಒಂದು ಕ್ರಮವನ್ನು ನಾವು ಕೈಗೊಳ್ಳುತ್ತೇವೆ. ಇನ್ನೊಂದು ವಿಚಾರದಿಂದಲೂ ಅದು ಹಿಂದೆಮುಂದೆ ಆಗುತ್ತಿರಬಹುದು, ಅಲ್ಲೂ ಕೂಡ ಈ ಅಭಿವೃದ್ಧಿ ಶುಲ್ಕದ ಬಗ್ಗೆ ಕೆಲವು ಭಿನ್ನಾಭಿಪ್ರಾಯಗಳಿದ್ದಾವೆಂದು ತಿಳಿದು ಬಂದಿದ್ದರಿಂದ ನಾನು ಹೇಳುತ್ತಿದ್ದೇನೆ. ಏನೇ ರಾಜಕೀಯವಿದ್ದರೂ ಕೂಡ ನಾವು ಸಕ್ರಮಗೊಳಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಶ್ರೀ ಇ. ಮಾರುತಿರಾವ್ ಪವಾರ್ : ಸಚಿವರು ಹೇಳಿದಂತೆ ಈಗಾಗಲೇ ಆ ತಾಯಿ 1982ರಲ್ಲಿ ಮಾರಾಟ ಮಾಡಿದ್ದಾರೆ, ಈತನೂ ಕೂಡ ಮಾರಾಟವಾದ ಸಂದರ್ಭದಲ್ಲಿ ಕೆಲವು ಅರ್ಜಿಗಳಲ್ಲಿ ಸಹಿ ಮಾಡಿದ್ದಾನೆ. ಆದರೂ ಕೂಡ ಈಗ ನಾನು ಆಗ ಅಪ್ರಾಪ್ತ ವಯಸ್ಕನಾಗಿದ್ದೆ ಈಗ ಆಗುವುದಿಲ್ಲವೆನ್ನುವ

ಒಂದು ಬಲವಂತದಿಂದ, ಒತ್ತಡದಿಂದ ಈ ರಾಜಕೀಯ ಮಾಡುತ್ತಿದ್ದಾನೆ, ತಾವು ವಾಸ್ತವಿಕತೆಯನ್ನು ಅರ್ಥ ಮಾಡಿಕೊಳ್ಳಬೇಕು. ಈಗ ಅದನ್ನು ಸಕ್ರಮಗೊಳಿಸಲಿಲ್ಲವೆಂದರೆ, ಅಲ್ಲಿ ವಾಸ ಮಾಡತಕ್ಕಂಥವರಿಗೆ ಸರ್ಕಾರದಿಂದ ಅನ್ಯಾಯ ಮಾಡಿದಂತಾಗುತ್ತದೆ, ಈ ಸಕ್ರಮದ ಕೆಲಸವನ್ನು ಯಾವಾಗ ಮಾಡಿ ಮುಗಿಸುತ್ತೀರಿ? ತಕ್ಷಣದಲ್ಲಿ ಈ ಕ್ರಮ ಜರುಗಿಸಬೇಕು, ಇಲ್ಲದಿದ್ದರೆ ಮತ್ತೆ ಅವನು ಅಲ್ಲಿ ಪ್ರಭಾವ ಬೀರುತ್ತಾನೆ.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ ; ಮಹಾನಗರಪಾಲಿಕೆಯವರು ಸಕ್ರಮ ಮಾಡಿ ಮುಗಿಸುತ್ತೇವೆಂದು ಹೇಳುವ ಮಾಹಿತಿ ಬರೀ ಸುಳ್ಳು; ಸತ್ಯಕ್ಕೆ ದೂರವಾದುದು, ಅವರು ಪ್ರಾಮಾಣಿಕವಾದ ಅಂಶವನ್ನು ಕೊಟ್ಟಿಲ್ಲ, ಅದಕ್ಕೆ ಒಂದು ಸಮಿತಿ ರಚನೆ ಮಾಡುತ್ತೇವೆನ್ನುವುದನ್ನು ಹೇಳಬೇಕು, ನೀವು ಅಧಿಕಾರಿಗಳಿಗೆ ಆದೇಶ ನೀಡಿ ಈ ಸಕ್ರಮ ಕಾರ್ಯವನ್ನು ತುರ್ತಾಗಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಇ. ಮಾರುತಿರಾವ್ ಪವಾರ್ : ಇದಕ್ಕೆ ಸಮಯ ಕೊಡಬೇಡಿ. ತಕ್ಷಣ ಸಕ್ರಮ ಮಾಡಿ.

ಶ್ರೀ ಅನಂತನಾಗ್ : ಸಂಬಂಧಪಟ್ಟಂಥ ಮಂತ್ರಿಗಳು ಇವತ್ತು ಬಂದಿಲ್ಲ, ಅವರು ಈ ಉತ್ತರವನ್ನು ಕೊಟ್ಟಿದ್ದಾರೆ. ಆದರೂ ಇದರ ಬಗ್ಗೆ ನಾನು ವಿಚಾರಣೆ ಮಾಡಿ ತಮಗೆ ತಿಳಿಸುತ್ತೇನೆ.

ಕುಂದಾಪುರಕ್ಕೆ ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆ

169 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕುಂದಾಪುರ ಪುರಸಭೆಗೆ ಕುಡಿಯುವ ನೀರಿನ ಮತ್ತು ಒಳಚರಂಡಿ ಯೋಜನೆಗಳಿಗೆ ಮಂಜೂರಾತಿ ಮಾಡಲಾಗಿದೆಯೆ?*

2. *ಸದರಿ ಯೋಜನೆಗೆ ವಿಶ್ವಬ್ಯಾಂಕ್ ಹಾಗೂ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸಾಲ ಪಡೆಯಲಾಗಿದೆಯೇ? ಪಡೆಯಲಾಗಿದ್ದಲ್ಲಿ ಮೊತ್ತವೆಷ್ಟು?*

ಶ್ರೀ ಬಿ.ಎನ್ ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಇಲ್ಲ. ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ವೆಸ್ಟ್‌ಕೋಸ್ಟ್ ಅಭಿವೃದ್ಧಿ ಯೋಜನೆಯಡಿ ಸಾಲ ಪಡೆಯಲು ಪ್ರಸ್ತಾವನೆಗಳನ್ನು ತಯಾರಿಸಲಾಗುತ್ತಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಕೊಟ್ಟಿರುವ ಉತ್ತರಕ್ಕೆ ಪ್ರಥಮವಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಎಲ್ಲಾ ಕಡೆ 'ಇಲ್ಲ' ಇಲ್ಲವೆಂದು ಕೊಟ್ಟಿದ್ದೀರಿ. ಕುಂದಾಪುರ ಪುರಸಭೆಯ ಕುಡಿಯುವ ನೀರಿನ ಮತ್ತು ಒಳಚರಂಡಿ ಯೋಜನೆ ಮಂಜೂರು ಮಾಡಿದೆಯೇ ಎಂದು ಕೇಳಿದರೆ ಇಲ್ಲವೆಂದು ಹೇಳಿದ್ದೀರಿ, ಸದರಿ ಯೋಜನೆಗೆ ವಿಶ್ವಬ್ಯಾಂಕ್ ಮತ್ತು ಏಷ್ಯನ್ ಡೆವಲಪ್‌ಮೆಂಟ್